ಸಾಕ್ಷಿಯನ್ನು ದಿಃ **31.03.2023** ರಂದು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಟಿ ಪಿ ವಕೀಲರಿಂದಃ**

10. ನಿಪಿ-1 ಫಿರ್ಯಾದಿಯನ್ನು ಡಿಸಿ ಆಫೀಸ್ ಹತ್ತಿರ ಟೈಪ್ ಮಾಡಿಸಿದ್ದೇನೆ. ಅದನ್ನು ಟೈಪ್ ಮಾಡಿದವರ ಹೆಸರು ಗೊತ್ತಿಲ್ಲ. ಫಿರ್ಯಾದಿಯನ್ನು ಬನ್ನೇರುಘಟ್ಟ ಪೋಲಿಸ್ ಠಾಣೆಯಲ್ಲಿ ಇನ್ಸ್ ಪೆಕ್ಟರ್ ರವರಿಗೆ ಕೊಟ್ಟಿದ್ದೇನೆ. 2015 ನೇ ಇಸವಿ 5 ನೇ ತಿಂಗಳಿನಲ್ಲಿ ಫಿರ್ಯಾದಿ ನೀಡಿದ್ದೇನೆ. ದಿನಾಂಕ ನೆನಪಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಫಿರ್ಯಾದಿಯನ್ನು ಟೈಪ್ ಮಾಡಿದ ಮೇಲೆ ಅವರು ಓದಿ ಹೇಳಿದ್ದಾರೆ. ಫಿರ್ಯಾದಿಯನ್ನು ಟೈಪ್ ಮಾಡಿಸುವಾಗ ನನ್ನ ಗಂಡ ನನ್ನ ಜೊತೆ ಇದ್ದರು. ಎಸ್ ಸಿ ಎಸ್ ಟಿ ಸಂಘದ ಲೀಡರ್ಸ್ ಸಹ ಆಗ ಇದ್ದರು. ಆ ಲೀಡರ್ಸ್ ಗಳೇ ಫಿರ್ಯಾದಿಯನ್ನು ರೆಡಿ ಮಾಡಿಸಿದ್ದಾರೆ ಎಂದರೆ ಸಾಕ್ಷಿದಾರರು ನಾನು ಲೀಡರ್ಸ್ ಗೆ ಹೇಳಿದ್ದೆ ಅವರು ಟೈಪ್ ಮಾಡಿಸಿದ್ದಾರೆ ಎನ್ನುತ್ತಾರೆ. ಮೆಜೆಸ್ಟಿಕ್ ಹತ್ತಿರದ ಡಿಸಿ ಆಫೀಸ್ ನಲ್ಲಿ ಟೈಪ್ ಮಾಡಿಸಿದ್ದೇನೆ. ಇಬ್ಬರು ಎಸ್ ಸಿ ಎಸ್ ಟಿ ಸಂಘದ ಲೀಡರ್ಸ್ ಇದ್ದರು. ಅವರ ಹೆಸರು ಜ್ಞಾಪಕವಿಲ್ಲ. ಎಸ್ ಸಿ ಎಸ್ ಟಿ ಸಂಘದ ಲೀಡರ್ಸ್ ಅಲ್ಲಿ ಕುಳಿತಿದ್ದು ಯಾರೇ ಬಂದರೂ ಅವರೇ ಕಂಪ್ಲೆಂಟ್ ಗಳನ್ನು ರೆಡಿ ಮಾಡಿಸುತ್ತಾರೆ ಎಂದರೆ ಸರಿ.

11. ಆರೋಪಿ, ಆತನ ಹೆಂಡತಿ ಮತ್ತು ಆತನ ಸಂಬಂಧಿಕ ಇವರ ಹೆಸರಿಗೆ ದಿಃ06.02.2013 ರಂದು ನನಗೆ ಸಂಬಂಧಿಸಿದ ಆನೇಕಲ್ ತಾಃ, ಜಿಗಣಿ ಹೋಬಳಿಯ ಮಂಟಪ ಗ್ರಾಮ ಪಂಚಾಯ್ತಿಯ ಸಂಪಂಗಿರಾಮನಗರದ ಖಾತೆ ಸಂಖ್ಯೆ 29/38 ರಲ್ಲಿರುವ ಮನೆಯನ್ನು ನೊಂದಾಯಿತ ಕ್ರಯದ ಕರಾರು ಪತ್ರವನ್ನು ನಾನು, ನನ್ನ ಗಂಡ, ನನ್ನ ಮಗ ಮತ್ತು ಸೊಸೆ ಮಾಡಿಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಈಗ ತೋರಿಸಿದ ದಾಖಲೆಯಲ್ಲಿ ನನ್ನ, ನನ್ನ ಗಂಡ, ನನ್ನ ಮಗ ಮತ್ತು ಸೊಸೆಯ ಫೋಟೋಗಳು ಇವೆ. ಸಾಕ್ಷಿಗೆ ತೋರಿಸಿದ ದಾಖಲೆ ಖರೀದಿ ಕರಾರು ಪತ್ರದ ದೃಡೀಕೃತ ನಕಲು ಇದ್ದು ಅದನ್ನು ನಿಡಿ-1 ಎಂದು ಮತ್ತು ಸಾಕ್ಷಿದಾರರು ಗುರ್ತಿಸಿದ ಅವರ ಮತ್ತು ಅವರ ಸಂಬಂಧಿಕರ ಫೋಟೋಗಳನ್ನು ಒಟ್ಟಾಗಿ ನಿಡಿ-1(ಎ) ಎಂದು

ಗುರ್ತಿಸಲಾಯಿತು. ನಿಡಿ-1(ಎ) ಫೋಟೋಗಳ ಮುಂದೆ ಇರುವ ಸಹಿಗಳು ನನ್ನದು, ನನ್ನ ಗಂಡ, ಮಗ ಮತ್ತು ಸೊಸೆಯದ್ದು ಎಂದರೆ ಸರಿ. ನಿಡಿ-1 ರ ಎಲ್ಲಾ ಪುಟಗಳಲ್ಲಿ ನಾವು ಸಹಿ ಮಾಡಿದ್ದೇವೆ ಎಂದರೆ ಸರಿ. ನಿಡಿ-1 ರಲ್ಲಿರುವ ಕವಿತಾ ಆರೋಪಿಯ ಹೆಂಡತಿ ಮತ್ತು ಅದರಲ್ಲಿರುವ ವೆಂಕಟೇಶ್ ಆರೋಪಿಯ ಸಂಬಂಧಿಕ ಎಂದರೆ ಸರಿ. ಸದರಿ ಮನೆಯ ಕರಾರು ಪತ್ರ ಬರೆದುಕೊಟ್ಟು ಆರೋಪಿಯಿಂದ ಮೂವತ್ತು ಲಕ್ಷ ರೂಪಾಯಿಯನ್ನು ನಗದು ರೂಪದಲ್ಲಿ ನಾವು ಪಡೆದಿದ್ದೇವೆ ಎಂದರೆ ಸರಿಯಲ್ಲ. ಬಾಕಿ ಎರಡು ಲಕ್ಷ ರೂಪಾಯಿ ಪಡೆದು ಮೂರು ವರ್ಷದೊಳಗೆ ಖರೀದಿ ಪತ್ರ ಬರೆದುಕೊಡುವುದಾಗಿ ಕರಾರು ಪತ್ರ ಬರೆದುಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

12. ನಮ್ಮ ಮನೆಯನ್ನು ನಾರಾಯಣಸ್ವಾಮಿ ಮತ್ತು ವೆಂಕಟೇಶಪ್ಪ ಇವರಿಗೆ ಸಾಲವನ್ನು ತೀರಿಸುವ ಸಲುವಾಗಿ 28 ಲಕ್ಷ ರೂಪಾಯಿಗಳಿಗೆ ವ್ಯಾಪಾರ ಮಾಡಿ ಬನ್ನೇರುಘಟ್ಟ ಸಬ್ ರಿಜಿಸ್ಟರ್ ಕಛೇರಿಯಲ್ಲಿ ದಿಃ06.02.2013 ರಂದು ನಾರಾಯಣಸ್ವಾಮಿರವರ ಹೆಂಡತಿ ಕವಿತಾ ಮತ್ತು ವೆಂಕಟೇಶ್ ಇವರ ಹೆಸರಿಗೆ ನಮ್ಮ ಮನೆಯ ಕ್ರಯ ಮಾಡಿಕೊಟ್ಟಿರುತ್ತೇವೆ ಮತ್ತು ನಾನು ಮತ್ತು ನನ್ನ ಕುಟುಂಬದವರು ಸಹಿ ಮಾಡಿ ರಿಜಿಸ್ಟರ್ ಮಾಡಿಕೊಟ್ಟಿರುತ್ತೇವೆ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ರಿಜಿಸ್ಟರ್ ಆದ ನಂತರ ನಾವು ಇದ್ದ ಮನೆಯನ್ನು ಖಾಲಿ ಮಾಡಲು ಆರು ತಿಂಗಳು ಕಾಲಾವಕಾಶ ತೆಗೆದುಕೊಂಡಿದ್ದೆವು ಎಂದು ಸಹ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಡಿ-2 ಎಂದು ಗುರ್ತಿಸಲಾಯಿತು. ನಿಡಿ-1 ರ ಪ್ರಕಾರ ಬಾಕಿ ಹಣವನ್ನು ಪಡೆದು ಖರೀದಿ ಪತ್ರ ಮಾಡಿಕೊಡುವಂತೆ ಆರೋಪಿ ಕೇಳಿದಾಗ ಆತನ ವಿರುದ್ದ ಈ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

13. ಆರೋಪಿಯು ಕರಾರು ಪತ್ರಕ್ಕೆ ಸಂಬಂಧಿಸಿದಂತೆ ಆನೇಕಲ್ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಹೂಡಿದ್ದಾರೆ ಎಂದರೆ ಸರಿ. ಈಗ ತೋರಿಸಿದ ದಾಖಲೆ ಸದರಿ ದಾವೆ ಇರುತ್ತದೆ ಎಂದರೆ ಸರಿ. ಅದನ್ನು ನಿಡಿ-3 ಎಂದು ಗುರ್ತಿಸಲಾಯಿತು. ನನ್ನ ಮಗ ಮತ್ತು ನನ್ನ ಗಂಡ ಆರೋಪಿಯ ಹತ್ತಿರ ಸಾಲ ಮಾಡಿದ್ದಾರೆಂದು ಅದಕ್ಕೆ ಸಂಬಂಧಿಸಿದಂತೆ ಚೆಕ್

ಬೌನ್ಸ್ ಕೇಸ್ ಸಹ ಅವರ ವಿರುದ್ಧ ನಡೆಯುತ್ತಿದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಚೆಕ್ಕುಗಳನ್ನು ಮನೆಗೆ ನುಗ್ಗಿ ನಮಗೆ ಹೊಡೆದು ತೆಗೆದುಕೊಂಡು ಹೋಗಿದ್ದಾರೆ ಎನ್ನುತ್ತಾರೆ. ನಿಮ್ಮ ಗಂಡ ಐದು ಲಕ್ಷ ರೂಪಾಯಿ ಹಾಗೂ ನಿಮ್ಮ ಮಗ ಒಂದು ಲಕ್ಷ ರೂಪಾಯಿ ಸಾಲವನ್ನು ಆರೋಪಿಯಿಂದ ಪಡೆದಿದ್ದಾರೆ ಎಂದರೆ ಸಾಕ್ಷಿದಾರರು ಬಂಡೆ ಹೊಡೆಯಲು ಆಳುಗಳನ್ನು ಕರೆದುಕೊಂಡು ಬರುವುದಕ್ಕೆ ಮತ್ತು ಅವರ ಖರ್ಚಿಗೆ ಎಂದು ಅವರ ಹಣವನ್ನು ನನ್ನ ಗಂಡ ಮತ್ತು ಮಗನಿಗೆ ಅವರು ಕೊಟ್ಟಿದ್ದರು ಎನ್ನುತ್ತಾರೆ. ಚೆಕ್ಕುಗಳು ಬೌನ್ಸ್ ಆದ ಮೇಲೆ ಈ ಸುಳ್ಳು ಫಿರ್ಯಾದಿಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

14. ಆರೋಪಿ ಮನೆಗೆ ನುಗ್ಗಿ ಚೆಕ್ಕುಗಳನ್ನು ತೆಗೆದುಕೊಂಡು ನಮಗೆ ಹೊಡೆದು ಹೋಗಿದ್ದ ಎನ್ನುವ ಬಗ್ಗೆ ಬನ್ನೇರುಘಟ್ಟ ಪೋಲಿಸ್ ಠಾಣೆಯಲ್ಲಿ ಫಿರ್ಯಾದಿ ನೀಡಿದ್ದೆ. ಈ ಪ್ರಕರಣದ ತನಿಖೆ ವೇಳೆಯಲ್ಲಿ ಆ ಕಂಪ್ಲೇಂಟ್ ನ ಪ್ರತಿಯನ್ನು ಪೋಲಿಸರಿಗೆ ನಾನು ಕೊಟ್ಟಿರಬಹುದು.

15. ಈ ಪ್ರಕರಣದ ಗಲಾಟೆ ಆದಾಗ ಮನೆಯಲ್ಲಿ ನಾನು, ನನ್ನ ಗಂಡ, ನನ್ನ ಸೊಸೆ, ನನ್ನ ಮಗ ಮತ್ತು ನನ್ನ ಮಗನ ಇಬ್ಬರು ಸ್ನೇಹಿತರಾದ ಪುಷ್ಪಲತಾ ಮತ್ತು ನಾಗರಾಜ್ ಇದ್ದೆವು. ಘಟನೆಯನ್ನು ಮೊಬೈಲ್ ನಲ್ಲಿ ರೆಕಾರ್ಡ್ ಮಾಡುವ ಪ್ರಯತ್ನ ಯಾರೂ ಮಾಡಿಲ್ಲ. ಗಲಾಟೆ ಆಗುವಾಗ ನಾನು ಸಂಖ್ಯೆ 100 ಕ್ಕೆ ಫೋನ್ ಮಾಡಿದ್ದೆ. ಪೋಲಿಸರು ನಮ್ಮ ಮನೆಯ ಹತ್ತಿರ ಬಂದಿದ್ದರು. ಯಾವ ನಂಬರ್ ನಿಂದ ಫೋನ್ ಮಾಡಿದಿರಿ ಎಂದರೆ ಸಾಕ್ಷಿದಾರರು ನಾನೇ ಠಾಣೆಗೆ ಹೋಗಿ ಹೇಳಿದ್ದೆ, ಆಗ ಒಬ್ಬ ಪೋಲಿಸ್ ಸಿಬ್ಬಂದಿ ಬಂದರು ಎನ್ನುತ್ತಾರೆ. ಕಂಪ್ಲೇಂಟ್ ಕೊಟ್ಟ ದಿನ ಆರೋಪಿಯನ್ನು ಹಿಡಿದುಕೊಂಡು ಹೋದರು. ಆ ರೀತಿ ಪೋಲಿಸರಿಗೆ ಫೋನ್ ಮಾಡಿದ್ದೆ, ಪೋಲಿಸರು ಬಂದಿದ್ದರು ಮತ್ತು ಅವರಿಗೆ ಘಟನೆಯ ಬಗ್ಗೆ ಹೇಳಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿ ಕೊಟ್ಟ ದಿನ ಆರೋಪಿಯನ್ನು ಪೋಲಿಸರು ಕರೆದುಕೊಂಡು ಹೋದರು ಎಂದು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಘಟನೆ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಕೆಟ್ಟ ಭಾಷೆಯಿಂದ ನಮಗೆ ಬೈದಿಲ್ಲ ಎಂದರೆ

ಸರಿಯಲ್ಲ. ನಿಪಿ-1 ನ್ನು ನಾನು ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ.

16. ನನ್ನ ಮಗನಿಗೆ ಅಪಘಾತವಾಗಿದ್ದಾಗ ಆರೋಪಿ ನನ್ನ ಗಂಡನ ಬಳಿ ಹಣ ಕೇಳಿದ್ದನು ಮತ್ತು ಹಣ ನೀಡದೇ ಇದ್ದರೆ ಮನೆ ತನ್ನದಾಗುತ್ತದೆ ಎಂದು ಹೇಳಿದ್ದ ಮತ್ತು ರೌಡಿಗಳನ್ನು ಕರೆದುಕೊಂಡು ಬಂದು ಗಲಾಟೆ ಮಾಡಿಸಿದ್ದ ಎಂಬ ಘಟನೆಯು 11 ನೇ ತಾರೀಖು, 6 ನೇ ತಿಂಗಳು ಸಂಜೆ 4 ಘಂಟೆ ಸಮಯದಲ್ಲಿ ಆಗಿದೆ ಎಂದು ಪೋಲಿಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಗಲಾಟೆಯಲ್ಲಿ ಆರೋಪಿ ಹಾಗೂ ಇತರರು ನಮ್ಮನ್ನು ಮನೆಯಿಂದ ಹೊರಗೆ ಹಾಕಿ ಮನೆಯಲ್ಲಿರುವ ಸಾಮಾನುಗಳನ್ನು ಮನೆಯ ಹೊರಗೆ ಹಾಕಿದ್ದನು ಮತ್ತು ನಾವು ದೇವಸ್ಥಾನದಲ್ಲಿ ರಾತ್ರಿ ಕಳೆದಿದ್ದೆವು ಎಂಬ ವಿಷಯಗಳನ್ನು ಪೋಲಿಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಆರೋಪಿ ನಮಗೆ ಜಾತಿ ನಿಂದನೆ ಮಾಡಿ ನನ್ನ ಸೀರೆ ಹಿಡಿದು ಎಳೆದಾಡಿದ್ದನು ಮತ್ತು ಘಟನೆ ಸಮಯದಲ್ಲಿ ಊರಿನ ಸಾಕಷ್ಟು ಜನ ಸೇರಿದ್ದರು ಮತ್ತು ಆರೋಪಿತರು ಹೆದರಿಸಿದ್ದರಿಂದ ಯಾರೂ ನಮ್ಮ ಸಹಾಯಕ್ಕೆ ಬಂದಿರಲಿಲ್ಲ ಎಂಬ ವಿಷಯಗಳನ್ನು ಪೋಲಿಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ.

17. ನಮ್ಮ ಮನೆಯ ಬಳಿ ನಾರಾಯಣಸ್ವಾಮಿರವರ ಹೆಂಡತಿ ಕವಿತಾ ಮತ್ತು ವೆಂಕಟೇಶ್ ರವರುಗಳು ಬಂದು ಗಲಾಟೆ ಮಾಡಿರುವುದಿಲ್ಲ ಎಂದು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಡಿ-4 ಎಂದು ಗುರ್ತಿಸಲಾಯಿತು. ನಾನು ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು